ಶ್ರೀ ಬಿ.ಸೋಮಶೇಖರ್ (ಕಂದಾಯ ಸಚಿವರು):

ಅ) ಹೌದು.

ಆ) ಸರ್ಕಾರದ ಅಳತೆಗೋಲಿನ ಪ್ರಕಾರ 514 ಲಂಬಾಣಿ ತಾಂಡಗಳನ್ನು ಕಂದಾಯ ಗ್ರಾಮಗಳನ್ನಾಗಿ ಘೋಷಿಸಿ ರಾಜ್ಯ ಪತ್ರದಲ್ಲಿ ಅಧಿಸೂಚನೆ ಹೊರಡಿಸಲಾಗಿದೆ.

ಇ) ಸರ್ಕಾರದ ಅಳತೆಗೋಲಿನ ಪ್ರಕಾರ, ಎಲ್ಲಾ ತಾಂಡಗಳನ್ನು ಕಂದಾಯ ಗ್ರಾಮಗಳನ್ನಾಗಿ ಘೋಷಿಸುವ ಬಗ್ಗೆ ಎಲ್ಲಾ ಜಿಲ್ಲಾಧಿಕಾರಿಗಳಿಂದ ಬಾಕಿ ಉಳಿದಿರುವ ತಾಂಡಗಳ ಬಗ್ಗೆ ಪ್ರಸ್ತಾವನೆ ಕೋರಲಾಗಿದೆ.

ವಿಷಯ: ಕಮಲಾಪುರ (ಮೀಸಲು) ಕ್ಷೇತ್ರದಲ್ಲಿ ಕೊಳವೆ ಬಾವಿಗಳು.

1068 (1552)

ಶ್ರೀ ರೇವುನಾಯಕ ಬೆಳಮಗಿ (ಕಮಲಾಪುರ): ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆಯ ಕಮಲಾಪುರ ಮೀಸಲು ಕ್ಷೇತ್ರದಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಎಷ್ಟು ಕೊಳವೆ ಬಾವಿಗಳನ್ನು ಕೊರೆಯಲಾಗಿದೆ?

ಆ) ಇದರಲ್ಲಿ ಎಷ್ಟು ಪಂಪ್‌ಸೆಟ್‌ಗಳನ್ನು ಅಳವಡಿಸಲಾಗಿದೆ?

ಇ) ಇದರಿಂದ ಎಷ್ಟು ಜನರಿಗೆ ಲಾಭವಾಗಿದೆ?

ಈ) ಇನ್ನು ಎಷ್ಟು ಪಂಪ್‌ಸೆಟ್ ಅಳವಡಿಸಬೇಕಾಗಿದೆ?

ಶ್ರೀ ಕೆ.ಎಂ.ಕೃಷ್ಣಾರೆಡ್ಡಿ (ಸಮಾಜ ಕಲ್ಯಾಣ ಸಚಿವರು):

ಅ) ಕರ್ನಾಟಕ ಪರಿಶಿಷ್ಟ ಜಾತಿ : ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮದಿಂದ 13 ಕೊಳವೆಬಾವಿಗಳನ್ನು ಕೊರೆಯಲಾಗಿದೆ.

ಆ) 12 ಕೊಳವೆ ಬಾವಿಗಳಿಗೆ ಪಂಪ್‌ಸೆಟ್‌ಗಳನ್ನು ಒದಗಿಸಲಾಗಿದೆ.

ಇ) 19 ಕುಟುಂಬದವರಿಗೆ ಲಾಭವಾಗಿದೆ.

ಈ) 1 ಕೊಳವೆ ಬಾವಿಗೆ ಪಂಪ್‌ಸೆಟ್ ಒದಗಿಸಬೇಕಾಗಿದೆ.

ವಿಷಯ: ಬರಗಾಲ ಹಾಗೂ ಮಳೆಹಾನಿಗೊಳಗಾದವರಿಗೆ ಪರಿಹಾರ ಕೇಂದ್ರದಿಂದ ವಿಶೇಷ ಅನುದಾನ.